ಸಂ. ಜಿಪಂಅ/ಶಿಕ್ಷಣ/ಸಿಆರ್-20/14-15

ಜಿಲ್ಲಾ ಪಂಚಾಯತ ಕಾರ್ಯಾಲಯ
ಉತ್ತರಕನ್ನಡ
ಕಾರವಾರ, ದಿನಾಂಕ: 27-09-2014

ರಿಗೆ:

ಉಪ ನಿರ್ದೇಶಕರು(ಆಡಳಿತ),
ಸಾರ್ವಜನಿಕ ಶಿಕ್ಷಣ ಇಲಾಖೆ,
ಕಾರವಾರ/ಶಿರಸಿ

ಮಾನ್ಯರೇ,

ವಿಷಯ:- ನಮ್ಮ ಗ್ರಾಮದ ಜಲ ಸಂಪನ್ಮೂಲಗಳ ಹಾಗೂ ಅವುಗಳ ಸುತ್ತಮುತ್ತಲಿನ ಜೀವ ವೈವಿಧ್ಯತೆ ಎಂಬ ವಿಷಯದ ಬಗ್ಗೆ ಉತ್ತಮವಾಗಿ ವೈಜ್ಞಾನಿಕ ವರದಿ ಮಂಡಿಸುವ ಸ್ಪರ್ಧೆಗೆ ವಿದ್ಯಾರ್ಥಿಗಳು ಭಾಗವಹಿಸುವ ಬಗ್ಗೆ

ಉಲ್ಲೇಖ:- Dr. M.D.Subash Chandran, Centre for Ecological Sciences Field Station, Indian Institute of Science, Bangalore ರವರ ಪತ್ರ ದಿನಾಂಕ: 18-09-2014

///

ಉತ್ತರಕನ್ನಡ ಜಿಲ್ಲೆಯ ಪ್ರೌಢ ಶಾಲೆ ಹಾಗೂ ಕಾಲೇಜು ವಿದ್ಯಾರ್ಥಿ/ನಿಯರಿಗೆ ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು ರವರ ಜೀವ ಪರಿಸರ ವಿಜ್ಞಾನ ಕೇಂದ್ರವು ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನ ಸೋಂದಾ, ಶಿರಸಿ ರವರ ಸಹಯೋಗದೊಂದಿಗೆ "ನಮ್ಮ ಗ್ರಾಮದ ಜಲ ಸಂಪನ್ಮೂಲಗಳ ಹಾಗೂ ಅವುಗಳ ಸುತ್ತಮುತ್ತಲಿನ ಜೀವ ವೈವಿಧ್ಯತೆ" ಎಂಬ ವಿಷಯದ ಬಗ್ಗೆ ಉತ್ತಮವಾಗಿ ವೈಜ್ಞಾನಿಕ ವರದಿ ಮಂಡಿಸುವವರೆಗೆ "ಯುವ ಸಹ್ಯಾದ್ರಿ ಜೀವ ವಿಜ್ಞಾನಿ-2014" ಪ್ರಶಸ್ತಿಯನ್ನು 2014ರ ನವೆಂಬರ್ 13-15 ರಲ್ಲಿ ಶಿರಸಿಯಲ್ಲಿ ನಡೆಯುವ ಕೆರೆ-2014 ಸಮ್ಮೇಳನದಲ್ಲಿ ನೀಡಲು ಸ್ಪರ್ಧೆಯನ್ನು ಜಿಲ್ಲಾ ಮಟ್ಟದಲ್ಲಿ ಆಯೋಜಿಸಿರುತ್ತಾರೆ. ಅದಲ್ಲದೇ ಉತ್ತಮ ಮಾರ್ಗದರ್ಶಕ ಶಿಕ್ಷಕ/ಕಿಯರಿಗೂ ಪ್ರಶಸ್ತಿ ನೀಡಲಾಗುವುದು. ತಾಲೂಕು ಮಟ್ಟದಿಂದ ಹಂತ ಹಂತವಾಗಿ ನಡೆಯುವ ಈ ಸ್ಪರ್ಧೆಯಲ್ಲಿ ಪ್ರತಿ ತರಗತಿ ಮಟ್ಟದಲ್ಲಿ ಆಯ್ಕೆಗಳಿರುತ್ತವೆ. ಹಾಗೂ ಮಾರ್ಗದರ್ಶಕ ಶಿಕ್ಷಕ/ಕಿಯರಿಗೂ ಪ್ರತಿ ತಾಲೂಕು ಕೇಂದ್ರದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು ರವರು ವಿಜ್ಞಾನಿ ವೃಂದದಿಂದ ವಿಶೇಷ ತರಬೇತಿಗಳನ್ನು ಆಯೋಜಿಸಿರುತ್ತಾರೆ. ( ಉಲ್ಲೇಖಿತ ಪತ್ರದ ಪ್ರತಿ ಹಾಗೂ ದಾಖಲಾತಿ ನಮೂನೆ ಪ್ರತಿ ಲಗತ್ತಿಸಿದೆ)

ಈ ಸ್ಪರ್ಧೆಯಲ್ಲಿ ವೈಯಕ್ತಿಕ ಆಸಕ್ತಿ ಮೇಲೆ ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳ ಹೆಸರನ್ನು ಈ ಕೂಡಲೇ ನೊಂದಾಯಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,

27/9/14

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ, ಉತ್ತರಕನ್ನಡ, ಕಾರವಾರ

ಪ್ರತಿ: ಉಪ ನಿರ್ದೇಶಕರು(ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕುಮಟಾ ರವರಿಗೆ ಸೂಕ್ತ ಕ್ರಮಕ್ಕಾಗಿ